# ಮಂಗಳೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರ ನೇಮಕಾತಿ ಸಂಬಂಧಿಸಿದ ಮಾರ್ಗಸೂಚಿ

ಪ್ರಸ್ತಾವನೆ:

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಂಜೂರಾತಿಯಾದ ಬೋಧಕ ಹುದ್ದೆಗಳಲ್ಲಿ ಭರ್ತಿಯಾಗದೆ ಉಳಿಕೆಯಾದ ಮತ್ತು ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ಅತಿಥಿ ಉಪನ್ಯಾಸಕರ ಮೂಲಕ ಹೊಂದಾಣಿಕೆ ಮಾಡುತ್ತಾ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟವು ಕ್ಷೀಣಿಸದಂತೆ ಕಾಯ್ದುಕೊಳ್ಳುವುದು, ಅಲ್ಲದೆ ಅತಿಥಿ ಉಪನ್ಯಾಸಕರ ಶೈಕ್ಷಣಿಕ ಸಾಧನೆಗಳು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಮತ್ತು ಇತರ ಶೈಕ್ಷಣಿಕ ಸೂಚ್ಯಾಂಕ ಮಾನ್ಯತೆಗಳನ್ನು ಪಡೆಯಲು ರೂಪುರೇಷೆ ಹಾಕಿಕೊಳ್ಳುವುದು, ಅತಿಥಿ ಉಪನ್ಯಾಸಕರ ಕಾರ್ಯಭಾರ ಮತ್ತು ಸಂಭಾವನೆ ನಿಗದಿಪಡಿಸುವುದು ಇತ್ಯಾದಿಗಳ ಸಲುವಾಗಿ ಮಾರ್ಗಸೂಚಿ ರಚಿಸಲು ದಿನಾಂಕ: 29.12.2023ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂ.ಡಿಇವಿ:ಸಾ:ಸ.7:18(2023)ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಿಗೆ ಸಂಬಂಧಿಸಿ ಮಾರ್ಗಸೂಚಿ ರಚಿಸುವಂತೆ ನಿರ್ಣಯಿಸಲಾಗಿರುತ್ತದೆ. ಅದರಂತೆ ಮಾರ್ಗಸೂಚಿ ಸಮಿತಿಯ ಸಭೆಯನ್ನು ದಿನಾಂಕ: 06.06.2024 ,05.08.2024 ಮತ್ತು 19.02.2025ರಂದು ಕರೆಯಲಾಗಿದ್ದು, ಸದರಿ ಸಮಿತಿಯ ಶಿಫಾರಸ್ಸುಗಳನ್ನು ಒಳಗೊಂಡ ಮಾರ್ಗಸೂಚಿ ಈ ಕೆಳಗಿನಂತಿದೆ.

1. ಸ್ನಾತಕ /ಸ್ನಾತಕೋತ್ತರ ಕಾರ್ಯಕ್ರಮಗಳ ಅತಿಥಿ ಉಪನ್ಯಾಸಕರ ಪೂರ್ಣಕಾಲಿಕ ಕಾರ್ಯಭಾರ ಎಂಬುದನ್ನು ಪ್ರಾಯೋಗಿಕ ತರಗತಿ ರಹಿತ ಕೋರ್ಸುಗಳಿಗೆ 16 ಗಂಟೆ ಹಾಗೂ ಪ್ರಾಯೋಗಿಕ ತರಗತಿ ಸಹಿತ ಕೋರ್ಸುಗಳಿಗೆ 20 ಗಂಟೆಯ ಕಾರ್ಯಭಾರ ಅವಧಿ ಎಂಬುವುದಾಗಿ ಪರಿಗಣಿಸುವುದು.
2. ಯುಜಿಸಿ ಮಾರ್ಗಸೂಚಿ ಪ್ರಕಾರ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರ ಆಯ್ಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು. ಯುಜಿಸಿ ವಿದ್ಯಾರ್ಹತೆ ಲಭ್ಯವಿಲ್ಲದೇ ಇದ್ದಲ್ಲಿ ಮಾತ್ರ ಇತರ ಅಭ್ಯರ್ಥಿಗಳ ನೇಮಕಾತಿಗೆ ಕ್ರಮಕೈಗೊಳ್ಳುವುದು.
3. ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವುವವರಿಗೆ ಪ್ರತಿ ಗಂಟೆಗೆ ರೂ. 650/-ರಂತೆ ಮಾಸಿಕ ಸಂಭಾವನೆ ಗರಿಷ್ಠ ರೂ.40,000/- ಅಲ್ಲದೇ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ಪ್ರತಿ ಗಂಟೆಗೆ ರೂ.600/- ಮಾಸಿಕ ಗರಿಷ್ಠ ರೂ. 35000/- ಸಂಭಾವನೆಯನ್ನು ಪಾವತಿಸುವುದು.
4. ನಿಯಮಬಾಹಿರ ಕೆಲಸವನ್ನು ಮಾಡುವ ಅತಿಥಿ ಉಪನ್ಯಾಸಕರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು.
5. ಅತಿಥಿ ಉಪನ್ಯಾಸಕರ ಗರಿಷ್ಠ ವಯೋಮಿತಿಯನ್ನು 60ಕ್ಕೆ ಸೀಮಿತಗೊಳಿಸುವುದು.
6. ಅತಿಥಿ ಉಪನ್ಯಾಸಕರಿಗೆ ಶೈಕ್ಷಣಿಕ ವರ್ಷದಲ್ಲಿ ಸಂಶೋಧನಾ ಲೇಖನದ ಪ್ರಕಟಣೆಯನ್ನು ಕಡ್ಡಾಯಗೊಳಿಸುವುದು.
7. UGC/NET/SLET ಇರುವ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಮಾತ್ರ ಇತರ ಅಭ್ಯರ್ಥಿಗಳ ನೇಮಕಕ್ಕೆ ಕ್ರಮಕೈಗೊಳ್ಳುವುದು.
8. ಸೇವಾನುಭವ ಇರುವ ಅತಿಥಿ ಉಪನ್ಯಾಸಕರನ್ನು ಆದ್ಯತೆಯಲ್ಲಿ ವಿಭಾಗದ ಇತರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು.
9. ಸ್ನಾತಕೋತ್ತರ ಕಾರ್ಯಕ್ರಮಕ್ಕೆ ಸಂಬಂಧಿಸಿ, ಅತಿಥಿ ಉಪನ್ಯಾಸಕರ ನೇಮಕಾತಿ ಮಾಡುವ ಸಂದರ್ಭದಲ್ಲಿ IQAC Feedback ನ್ನು ಅಗತ್ಯವಾಗಿ ಪಡೆಯುವುದು.
10. ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಆಯ್ಕೆಯಾಗುವ ಅತಿಥಿ ಉಪನ್ಯಾಸಕರಿಗೆ ವರ್ಷದಲ್ಲಿ ಎರಡು ಬಾರಿ Orientation ಕಾರ್ಯಕ್ರಮವನ್ನು ಇನ್ನು ಮುಂದೆ ಕಡ್ಡಾಯವಾಗಿ ನಡೆಸುವುದು.
11. Faculty Development Programme ನ ಸೌಲಭ್ಯವನ್ನು ಇನ್ನು ಮುಂದೆ ಎಲ್ಲಾ ಅತಿಥಿ ಉಪನ್ಯಾಸಕರಿಗೆ ವಿಸ್ತರಿಸುವುದು.
12. ಅಂತರಾಷ್ಟ್ರೀಯ /ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕಾರ್ಯಗಾರಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸುವ ಅತಿಥಿ ಉಪನ್ಯಾಸಕರು Paper Presentation ಮಾಡಿದ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದಲ್ಲಿ ಮಾತ್ರ ತರಗತಿಗಳನ್ನು/ಉಪನ್ಯಾಸ ಅವಧಿಯನ್ನು ಸರಿದೂಗಿಸುವ ಷರತ್ತಿಗೊಳಪಟ್ಟು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಇವರಿಗೆ OOD ಸೌಲಭ್ಯವನ್ನು ವಿಸ್ತರಿಸುವುದು.
13. ಸಾಧ್ಯವಾದಷ್ಟು ಎಲ್ಲಾ ಅತಿಥಿ ಉಪನ್ಯಾಸಕರನ್ನು ವಿಶ್ವವಿದ್ಯಾನಿಲಯವು ನಡೆಸುವ ಎಲ್ಲಾ ಕಾರ್ಯಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳುವುದು ಹಾಗೂ ಜವಾಬ್ದಾರಿಗಳನ್ನು ವಹಿಸುವುದು ಹಾಗೂ ನೇಮಕಾತಿಗೊಂಡಿರುವ ಎಲ್ಲಾ ಅತಿಥಿ ಉಪನ್ಯಾಸಕರು ಕಚೇರಿ ಅವಧಿಯಲ್ಲಿ ಕಡ್ಡಾಯವಾಗಿ ಹಾಜರಿರುವುದು.ಹಾಗೂ ಪರೀಕ್ಷಾ ಕಾರ್ಯ ಕರ್ತವ್ಯದ ಭಾಗವಾಗಿರುವುದರಿಂದ ಈ ಕುರಿತು ಯಾವುದೇ ಸಂಭಾವನೆಗೆ ಅರ್ಹರಾಗಿರುವುದಿಲ್ಲ.
14. ಮುಂದಿನ ಸಾಲಿನಿಂದ ಅತಿಥಿ ಉಪನ್ಯಾಸಕರ ಸಂದರ್ಶನವನ್ನು ನಡೆಸುವಾಗ ವೀಡಿಯೋ ಚಿತ್ರೀಕರಣ ನಡೆಸಿ ದಾಖಲಿಸುವುದು.
15. ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆಗಳನ್ನು ಹೊಂದಿರದ ಅತಿಥಿ ಉಪನ್ಯಾಸಕರು ನೇಮಕಾತಿಯಾದ ನಂತರ ಸದರಿ ವಿದ್ಯಾರ್ಹತೆಗಳನ್ನು ಪಡೆದಿರುವ ಬಗ್ಗೆ ಪ್ರಮಾಣಪತ್ರವನ್ನು ಹಾಜರುಪಡಿಸಿದರೆ ಯುಜಿಸಿ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ನೀಡುವ ಸಂಭಾವನೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳುವುದು.
16. ಅತಿಥಿ ಉಪನ್ಯಾಸಕರು ಸರಕಾರಿ ರಜಾ ದಿನಗಳನ್ನು ಹೊರತುಪಡಿಸಿ ತಿಂಗಳಿಗೆ ಒಂದು ದಿನ ರಜೆ ಪಡೆಯಬಹುದಾಗಿದೆ. ಬೇರೆ ಯಾವುದೇ ರಜೆಗೆ ಇವರು ಅರ್ಹರಾಗಿರುವುದಿಲ್ಲ.

ಕುಲಸಚಿವರು